# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,

## ಟಿ. ನರಸೀಪುರ.

## ಸಿ. ಸಿ ನಂ. 59/2025

ಪಿರ್ಯಾದಿದಾರರು : ಸರ್ಕಾರ ಪರವಾಗಿ ಬನ್ನೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು : 1. ಕುಮಾರ ಕೆ ಬಿನ್ ಕಂಬಯ್ಯ, 45 ವರ್ಷ,

2. ರತ್ನಮ್ಮ,
ಬಿನ್ ಕುಮಾರ ಕೆ, 40 ವರ್ಷ,

ಇಬ್ಬರ ವಾಸಃ ಬೇವಿನಹಳ್ಳಿ ಗ್ರಾಮ,
ಸೋಸಲೆ ಹೋಬಳಿ, ಟಿ.ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

## ದೋಷಾರೋಪಣೆ

**ಶ್ರೀ ಸಚಿನ್ ಹೆಚ್.ಆರ್, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಟಿ.ನರಸೀಪುರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುತ್ತೇನೆ.**

ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ

ದಿನಾಂಕ 19.02.2024 ರಂದು ರಾತ್ರಿ 4.00 ಗಂಟೆಗೆ ಬನ್ನೂರು ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಾಸಾ–1 ಕಂಬಯ್ಯರವರು ತಮ್ಮ ಮನೆಯ ಮುಂದೆ ಕುಳಿತಿದ್ದಾಗ 1 ನೇ ಆರೋಪಿಯಾದ ನೀವು ಮಧ್ಯಪಾನ ಮಾಡಿಕೊಂಡು ಬಂದು ನನಗೆ ಆಸ್ತಿ ಭಾಗ ಬೇಕು ಎಂದು ಗಲಾಟೆ ಮಾಡುತ್ತಿದ್ದಾಗ ಚಾಸಾ–1 ಕಂಬಯ್ಯರವರು ಎಲ್ಲರು ಕೂತು ಮಾತನಾಡಿಕೊಂಡು ಭಾಗ ತೆಗೆದುಕೊಳ್ಳಿ ಎಂದು ಹೇಳಿದ್ದಕ್ಕೆ ಕೋಪಗೊಂಡು 1 ನೇ ಅರೋಪಿಯಾದ ನೀವು ಏಕಾಏಕಿ ಒಂದು ಸೌದೆ ಸೀಳನ್ನು ತೆಗೆದುಕೊಂಡು ಬಂದು ಚಾಸಾ–1 ಕಂಬಯ್ಯರವರ ತಲೆಗೆ ಹೊಡೆದು ನೋವುಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಚಾಸಾ–2 ರವಿ ಕೆ ರವರು ಬಿಡಿಸಲು ಬಂದಾಗ 1 ನೇ ಆರೋಪಿಯಾದ ನೀವು ಚಾಸಾ–2 ರವಿರವರ ಎಡ ಕೈನ 4 ನೇ ಬೆರಳನ್ನು ಕಚ್ಚಿ ಗಾಯ ಮಾಡಿದ್ದು, ಚಾಸಾ–3 ಲಕ್ಷ್ಮೀರವರು ಕೇಳಲು ಬಂದಾಗ 1 ನೇ ಆರೋಪಿಯಾದ ನೀವು ಅವರನ್ನು ಕೈಯಿಂದ ತಳ್ಳಿದ್ದು, ಚಾಸಾ–4 ಚಿಕ್ಕತಾಯಮ್ಮರವರು ಕೇಳಲು ಬಂದಾಗ 2 ನೇ ಆರೋಪಿಯಾದ ನೀವು ಅವರಿಗೆ ಕೈಯಿಂದ ಮೈಕೈಗೆ ಹೊಡೆದು ನೋವುಂಟು ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ಅಪರಾಧಗಳಿಗಾಗಿ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು.

ದಿನಾಂಕಃ **27.10.2025.**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.**
**ಟಿ. ನರಸೀಪುರ.**

## **ಆರೋಪಿತರ ಹೇಳಿಕೆ**

ಪ್ರಶ್ನೆ-1 ಈಗ ಓದಿ ಹೇಳಿದ ಆರೋಪಣೆಯನ್ನು ಅರ್ಥ ಮಾಡಿಕೊಂಡಿರಾ ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

ಪ್ರಶ್ನೆ-2 ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

**(ಮೇಲ್ಕಂಡ ಆರೋಪಣೆಯನ್ನು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದು ಕೊಂಡಿದ್ದು ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ. ಎಫ್.ಸಿ., ಟಿ.ನರಸೀಪುರ.**

## **ಆರೋಪಿತರ ಸಹಿ**

1 ನೇ ಆರೋಪಿಃ

2 ನೇ ಆರೋಪಿಃ

ದಿನಾಂಕ 13.12.2022 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ತಿ.ನರಸೀಪುರ ತಾಲ್ಲೂಕು ಬನ್ನೂರು ಪೊಲೀಸ್ ಠಾಣೆ ಸರಹದ್ದು ಚಾಸಾ-1 ಮಹದೇವಮ್ಮರವರು ಚಾಸಾ-2 ಮರಿನಂಜಮ್ಮ ರವರ ಮನೆಯ ಮುಂದೆ ಚಾಸಾ-2 ಮರಿನಂಜಮ್ಮ, ಚಾಸಾ-3 ಹುಚ್ಚಮ್ಮ, ಚಾಸಾ-4 ಮಂಚಮ್ಮರವರ ಜೊತೆ ತೆಂಗಿನ ಮರದ ವಿಚಾರವಾಗಿ ಮಾತನಾಡುತ್ತಾ ನಿಂತಿರುವಾಗ ಅಲ್ಲಿಗೆ 1 ನೇ ಆರೋಪಿಯಾದ ನೀವು ಬಂದು ಚಾಸಾ-1 ಮಹದೇವಮ್ಮರವರನ್ನು ಉದ್ದೇಶಿಸಿ ಸೂಳೆ ಮುಂಡೆ ಎಂದು ಅವಾಚ್ಯ ಶಬ್ದದಿಂದ ಬೈಯ್ಯುವಾಗ ಚಾಸಾ-2 ರಿಂದ 4 ರವರು ಏಕೆ ಬೈಯ್ಯುತ್ತೀರಾ ಎಂದು ಕೇಳಿದ್ದಕ್ಕೆ ನೀವು ಯಾರು ಕೇಳುವುದಕ್ಕೆ ಬೋಳಿ ಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, 1 ನೇ ಆರೋಪಿಯಾದ ನೀವು, ಚಾಸಾ-2 ಮರಿನಂಜಮ್ಮ, ಚಾಸಾ-3 ಹುಚ್ಚಮ್ಮ, ಚಾಸಾ-4 ಮಂಚಮ್ಮರವರನ್ನು ಕೈಗಳಿಂದ ಹೊಡೆದು ಚಾಸಾ-2 ರವರು ಬಲಭುಜದ ಹತ್ತಿರ, ಚಾಸಾ-3 ರವರಿಗೆ ಬೆನ್ನಿಗೆ, ಚಾಸಾ-4 ರವರಿಗೆ ಮೂಗಿನ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಜಗಳ ಬಿಡಿಸಲು ಬಂದ ಚಾಸಾ-5 ಜಯಮ್ಮ ರವರಿಗೆ ಕೈಗಳಿಂದ ಮೈಕೈಗೆ ಹೊಡೆದಿದ್ದು ಅವರ ಎಡಕೆನ್ನೆ ಮತ್ತು ಬಲಭುಜದ ಬಳಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಚಾಸಾ-1 ಮಹದೇವಮ್ಮರವರು ಗಲಾಟೆ ಮಾಡಬೇಡ ಎಂದು ಹೇಳಿದ್ದಕ್ಕೆ ರಸ್ತೆಯಲ್ಲಿ ಬಿದ್ದಿದ್ದ ದೊಣ್ಣೆಯಿಂದ ಅವರ ಬಲಕೈ, ಬಲ ಭುಜಕ್ಕೆ ಹೊಡೆದು ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.